ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

ದೂರವಾಣಿ ಸಂಖ್ಯೆ:0821-2424079,2422110,2428383

ಫ್ಯಾಕ್ಸ್ ನಂ : 2429012 & 2428383 E-Mail : dcofficemysuru@gmail.com

ಸಂಖ್ಯೆ : MYSDC- MAG1 /MLO/71/2020 ದಿನಾಂಕ: 17 /03/2020

# COVID-19 ಕುರಿತು ಸಾರ್ವಜನಿಕರಿಗೆ ಸಲಹೆಗಳು

## ಸಾರ್ವಜನಿಕರು ಪ್ರವೇಶಿಸುವ ಉದ್ಯಾನವನ ಮತ್ತು ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಅನುಸರಿಸಬೇಕಾದ ಕೆಲವು ಕ್ರಮಗಳು

1. ಮೈಸೂರು ನಗರ ಪ್ರದೇಶದಲ್ಲಿ ಜಿಮ್, ಕ್ರೀಡೆ ಹಾಗೂ ಇನ್ನಿತರೆ ಚಟುವಟಿಕೆ ಕಾರ್ಯಕ್ರಮಗಳು ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲ ಉಂಟಾಗಿರುವ ಅಂಶವು ಮೈಸೂರು ಜಿಲ್ಲಾಡಳಿತದ ಗಮನದಲ್ಲಿರುತ್ತದೆ. ಆದಾಗ್ಯೂ ಮೈಸೂರು ನಗರದ ಜವಾಬ್ದಾರಿಯುತ ಪ್ರಜೆಯಾಗಿ ಜಿಲ್ಲಾಡಳಿತವು COVID – 19 ವೈರಾಣುವಿನಿಂದ ಆಗಬಹುದಾದ ತೊಂದರೆಗಳನ್ನು ತಡೆಗಟ್ಟಲು ಹಾಗೂ ಸಮುದಾಯಕ್ಕೆ ಸದರಿ ವೈರಾಣು ಹರಡುವುದನ್ನು ತಡೆಗಟ್ಟುವ ಸದುದ್ದೇಶದಿಂದ ಕ್ರಮ ಕೈಗೊಂಡಿದೆ.

2. ಸಾರ್ವಜನಿಕ/ಸಾಮಾಜಿಕ ಸ್ಥಳಗಳಲ್ಲಿ ಜನರು ಒಟ್ಟಿಗೆ ಸೇರುವುದರಿಂದ ದೂರವಾಗದಿದ್ದಲ್ಲಿ ವೈರಾಣು ಹರಡುವಿಕೆಯನ್ನು ತಡೆಗಟ್ಟಲು ಕೈಗೊಂಡಿರುವ ಎಲ್ಲಾ ಕ್ರಮಗಳು ನಿರರ್ಥಕವಾಗುತ್ತದೆ.

3. ಜನರು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಹಾಗೂ ಜನರು ದೊಡ್ಡ ಗುಂಪುಗಳಲ್ಲಿ ಸೇರುವುದರಿಂದ ಅಥವಾ ಜನನಿಬಿಡ ಪ್ರದೇಶಗಳಿಗೆ ತೆರಳುವುದರಿಂದ ಅಂತಹ ಪ್ರದೇಶಗಳಲ್ಲಿ ವೈರಾಣುವಿನಿಂದ ಸೋಂಕಿತವಾಗುವ ಹೆಚ್ಚಿನ ಸಾಧ್ಯತೆ ಇರುತ್ತದೆ.

4. ಅಂತರ್ಜಾಲ ಹಾಗೂ ಟೆಲಿವಿಜನ್ ಮೂಲಕ ಲಭ್ಯವಿರುವ ಗೃಹಧಾರಿತ ವ್ಯಾಯಾಮಗಳು ಹಾಗೂ ಯೋಗ ಮಾಡ್ಯೂಲ್ ಗಳನ್ನು ವೀಕ್ಷಿಸಿ ಅದರಂತೆ ಅಭ್ಯಾಸ ಮಾಡುವುದರಿಂದ ದೈಹಿಕ ಕ್ಷಮತೆ ಕಾಪಾಡಿಕೊಳ್ಳುವುದರೊಂದಿಗೆ ಆರೋಗ್ಯವಂತರಾಗಿರಬಹುದು.

17/3/2020

ಜಿಲ್ಲಾಧಿಕಾರಿ,

ಮೈಸೂರು ಜಿಲ್ಲೆ, ಮೈಸೂರು

Scanned with CamScanner